ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ.
4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು - 560 041
RAJIV GANDHI UNIVERSITY OF HEALTH SCIENCES, KARNATAKA.
4th 'T' Block, Jayanagar, Bangalore - 560 041

Ref. : RGUHS/ACA/AFF/F/AY-102/2021-22 Date : 05.05.2022

# NOTIFICATION

## NEELGANGA AYURVEDIC MEDICAL COLLEGE, HOSPITAL AND RESEARCH CENTRE, BASAVAKALYAN, BIDAR DISTRICT

Sub: Fresh affiliation to start BAMS course from the year 2021-22.

Ref:
1. Application dated: 15.06.2020 of the College for fresh affiliation for BAMS course for the year 2021-22.
2. Recommendation of Syndicate Sub Committee Meeting held on 27.08.2020.
3. Minutes of the 152nd Syndicate Meeting held on 09.10.2020.
4. GOK Order No. HFW 120 PTD 2020, Bangalore, dated: 30.04.2022 granted permission to start BAMS course with an intake of 60 (Sixty) seats from the year 2021-22.
5. NCISM Letter No. 4-172/2021-Ay. dated: 07.01.2022 granted permission to start BAMS course with an intake of 60 seats from the academic session 2021-22 under section 29 of NCISM Act 2020 and relevant regulations thereunder.

Rajiv Gandhi University of Health Sciences, Karnataka, Bangalore grants fresh affiliation as per section 45 of RGUHS Act 1994, to start **BAMS** course with an intake of **60 (Sixty)** seats from the academic year **2021-22** at **Neelganga Ayurvedic Medical College, Hospital and Research Centre, Basavakalyan, Bidar District** subject to fulfillment of conditions stipulated by the **NCISM** in its permission letter dated: **04.02.2022** and **Government of Karnataka** in its order dated: **30.04.2022.**

**This Notification is however, subject to compliance with the relevant rules, regulations & norms notified by the GOI/NCISM, GOK & University related to admissions.**

By Order
Sd/-
**REGISTRAR**

**To,**
**The Principal,**
**Neelganga Education Trust ®,**
**Neelganga Ayurvedic Medical College, Hospital and Research Centre, Srimati Shanta Somshekar Mahajan Campus, Ayurgram, Yerbhag,**
**Basavakalyan – 585331**
**Bidar District**

**Copy to:**

1. The Principal Secretary to the Government of Karnataka, Department of Health & Family Welfare, (Medical Education), Vikas Soudha, Dr. B.R. Ambedkar Road, Bangalore-560 001.
2. Director of Indian System of Medicine and Homoeopathy, Dhanvantry Road, Bangalore – 560 009.
3. The Secretary, National Commission for Indian System of Medicine, No.61-65, Institutional Area, Janakpuri D Block, New Delhi-110058.
4. The Secretary to the Government of India, Ministry of Health & Family Welfare, Department of Ayurveda, Yoga and Naturopathy, Unani, Siddha & Homoeopathy (AYUSH), "AYUSH BHAWAN", B-Block, GPO Complex, INA, New Delhi – 110 023.
5. The Registrar (Eva)/ Director, CDC / Deputy Registrar – Syndicate / Admission / Office Copy / Guard File.

By Order
**REGISTRAR**

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ನೀಲಗಂಗಾ ಎಜುಕೇಷನ್ ಟ್ರಸ್ಟ್ ಬೆಂಗಳೂರು (ರಿ), ನೀಲಗಂಗಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಸವ ಕಲ್ಯಾಣ, ಬೀದರ್ ಇವರಿಗೆ 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಬಿ.ಎ.ಎಂ.ಎಸ್. ಪದವಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ

ಓದಲಾಗಿದೆ:

1. ಭಾರತ ಸರ್ಕಾರದ ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಬೋರ್ಡ್, NCISM ಇವರ ಪತ್ರ ಸಂಖ್ಯೆ: Ref. No.4-172/2021-AY, Dated: 07.01.2022.
2. ಪ್ರಾಂಶುಪಾಲರು, ನೀಲಗಂಗ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಇವರ ದಿನಾಂಕ:12.01.2022ರ ಮನವಿ
3. ಆಯುಕ್ತರು, ಆಯುಷ್ ಇಲಾಖೆ, ಇವರ ಪತ್ರ ಸಂಖ್ಯೆ:ಆಯುಷ್/04ಅ(2)//2020-21, ದಿನಾಂಕ:17.02.2022

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1)ರ ಪತ್ರದಲ್ಲಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಬೋರ್ಡ್, NCISM ಕಾಯ್ದೆ 2020ರ ಸೆಕ್ಷನ್ 29ರ ಪ್ರಕಾರ ನೀಲಗಂಗ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಸವ ಕಲ್ಯಾಣ ಬೀದರ್ ಸಂಸ್ಥೆಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಬಿ.ಎ.ಎಂ.ಎಸ್ ಪದವಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಿರುತ್ತದೆ..

ಮೇಲೆ ಓದಲಾದ ಕ್ರ.ಸಂ (2)ರ ಪತ್ರದಲ್ಲಿ ಪ್ರಾಂಶುಪಾಲರು, ನೀಲಗಂಗಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಸವ ಕಲ್ಯಾಣ, ಬೀದರ್ ಇವರು ಭಾರತ ಸರ್ಕಾರದ NCISMರವರು ಸದರಿ ಸಂಸ್ಥೆಗೆ 2021-22ನೇ ಶೈಕ್ಷಣಿಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶ ಮಿತಿಯಲ್ಲಿ ಬಿ.ಎ.ಎಂ.ಎಸ್ ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡಿದ್ದು ಅದರಂತೆ ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಸಂ (3) ರ ಪತ್ರದಲ್ಲಿ ಆಯುಕ್ತರು , ಆಯುಷ್ ಇಲಾಖೆ, ಬೆಂಗಳೂರು ಇವರು ಭಾರತ ಸರ್ಕಾರದ National Commission for Indian System of Medicine (NCISM), ನವದೆಹಲಿ ಇವರು 2021-22ನೇ ಶೈಕ್ಷಣಿಕ ಸಾಲಿನಿಂದ ನೀಲಗಂಗಾ ಎಜುಕೇಷನ್ ಟ್ರಸ್ಟ್ (ರಿ) ನೀಲಗಂಗಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಶ್ರೀಮತಿ ಶಾಂತ ಸೋಮಶೇಖರ್ ಮಹಾಜನ್ ಕ್ಯಾಂಪಸ್, ಆಯುರ್ ಗ್ರಾಮ, ಯರಬಾಗ, ಬಸವಕಲ್ಯಾಣ ಇಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಬಿ.ಎ.ಎಂ.ಎಸ್ ಪದವಿ ಕೋರ್ಸ್‌ನ್ನು 60 ವಿದ್ಯಾರ್ಥಿಗಳ ಪ್ರವೇಶಕ್ಕೆ NCISMನವರು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರು ತಮ್ಮ ಸಂಸ್ಥೆಗೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ನೊಂದಣಿ ಪಡೆದು ಪ್ರಮಾಣ ಪತ್ರ ಸಲ್ಲಿಸುವ ಷರತ್ತಿಗೆ ಒಳಪಟ್ಟು 2021-22ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆಯುಷ್ ಆಯುಕ್ತರ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ನೀಲಗಂಗಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಸವ ಕಲ್ಯಾಣ ಬೀದರ್ ಇಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ 60 (ಅರವತ್ತು)

SRS

ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ ಬಿ.ಎ.ಎಂ.ಎಸ್ ಪದವಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲು ನಿರ್ಧರಿಸಿದೆ, ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 120 ಪಿಟಿಡಿ 2020, ಬೆಂಗಳೂರು,ದಿನಾಂಕ: 30.04.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2021-22ನೇ ಶೈಕ್ಷಣಿಕ ಸಾಲಿನಿಂದ ನೀಲಗಂಗಾ ಎಜುಕೇಷನ್ ಟ್ರಸ್ಟ್ ಬೆಂಗಳೂರು (ರಿ), ನೀಲಗಂಗಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಶ್ರೀಮತಿ ಶಾಂತ ಸೋಮಶೇಖರ್ ಮಹಾಜನ್ ಕ್ಯಾಂಪಸ್, ಆಯುರ್ ಗ್ರಾಮ, ಯಾರಬಾಗ, ಬಸವಕಲ್ಯಾಣ, ಬೀದರ್ ಇಲ್ಲಿ 60 (ಅರವತ್ತು) ವಿದ್ಯಾರ್ಥಿಗಳ ಪ್ರವೇಶ ಮಿತಿಯಲ್ಲಿ ಹೊಸದಾಗಿ ಬಿ.ಎ.ಎಂ.ಎಸ್ ಪದವಿ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
2. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.
3. ಭಾರತ ಸರ್ಕಾರ/ಎನ್.ಸಿ.ಐ.ಎಸ್.ಎಂ. ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕೇಂದ್ರ/ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
5. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
6. ಸರ್ಕಾರದ ಪೂರ್ವಾನುಮತಿಯಿಲ್ಲದೆ ಸಂಸ್ಥೆಯ ಹೆಸರು / ವಿಳಾಸ / ಟ್ರಸ್ಟನ್ನು ಬದಲಾಯಿಸಬಾರದು.
7. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಯೋಜನೆ/ ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.
8. ಸಂಸ್ಥೆಗೆ ಹೊಂದಿಕೊಂಡಿರುವ ಆಸ್ಪತ್ರೆಯನ್ನು ಎಲ್-4 ಬೋಧನಾ ಆಸ್ಪತ್ರೆ ಎಂದು ಕೆ.ಪಿ.ಎಂ.ಇ ಕಾಯ್ದೆ & ನಿಯಮಗಳಡಿಯಲ್ಲಿ ನೋಂದಣಿ ಪಡೆದು ಪ್ರಮಾಣ ಪತ್ರ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

S R Gorwar
30/4/2022

**(ಶೈಲಾ ಆರ್.ಗೊರವರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

**ಇವರಿಗೆ:**

30/4/22

1. The Secretary to National Commission for Indian System of Medicine Ministry of AYUSH, Govt of India, No, 61-65, Institutional Area, Janakpuri, D, Block, New Delhi-110058.
2. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು-09.
3. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು.
4. ಪ್ರಾಂಶುಪಾಲರು, ನೀಲಗಂಗಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಶ್ರೀಮತಿ ಶಾಂತ ಸೋಮಶೇಖರ್ ಮಹಾಜನ್ ಕ್ಯಾಂಪಸ್, ಆಯುರ್ ಗ್ರಾಮ, ಯಾರಬಾಗ, ಬಸವಕಲ್ಯಾಣ ಬೀದರ್
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

**ಪ್ರತಿಗಳು:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು-01.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು.

3. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು.